# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 15-9-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 6 ಶೇಕಡಾ ಹೆಚ್ಚಳ

ಸೋಯಾಬೀನ್ ಎಣ್ಣೆ ದರ ಹೆಚ್ಚಳವನ್ನನುಸರಿಸಿ, ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 3 ನೇ ಅವಧಿಗೆ ಹೆಚ್ಚಳವಾಗಿ 6 ಶೇಕಡಾ (217 ರಿಂಗಿಟ್ಸ್) ಸಮೀಪ ದರ ಹೆಚ್ಚಳವಾಗಿದೆ. ಆಗಸ್ಟ್ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 87 ಶೇಕಡಾ ಹೆಚ್ಚಳವಾಗಿರುವುದು ಹಾಗೂ ಸೆಪ್ಟೆಂಬರ್ 1-10 ರ ಅವಧಿಯಲ್ಲಿ ಮಲೇಶ್ಯಾದ ಪಾಮೆಣ್ಣೆ ರಫ್ತು ಹೆಚ್ಚಳವಾಗಿರುವುದು ಹಾಗೂ ಅಮೇರಿಕಾದಲ್ಲಿ ಸೋಯಾ ಬೀನ್ ಉತ್ಪಾದನೆ ಇಳಿಕೆಯ ವರದಿ ಇವುಗಳು ಪಾಮೆಣ್ಣೆ ದರ ಹೆಚ್ಚಳಕ್ಕೆ ಪ್ರಮುಖ ಕಾರಣಗಳೆನ್ನಲಾಗಿದೆ.

## ಅಮೇರಿಕಾದ ಸೋಯಾಬೀನ್ ಜೋಳ ಪೂರೈಕೆ ಬಹು ವರ್ಷಗಳ ಕನಿಷ್ಠ ಮಟ್ಟಕ್ಕೆ

ಉತ್ಪಾದನೆ ಇಳಿಕೆಯಿಂದ ಅಮೇರಿಕಾದ ಜೋಳ ಹಾಗೂ ಸೋಯಾಬೀನ್ ಪೂರೈಕೆ ಬಹುವರ್ಷಗಳ ಕನಿಷ್ಠ ಮಟ್ಟಕ್ಕಿಳಿಯುವ ಸಾಧ್ಯತೆಗಳಿವೆಯೆನ್ನಲಾಗಿದೆ. ಅತಿ ಒಣ ಹಾಗೂ ಉಷ್ಣ ಹವೆಯಿಂದಾಗಿ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಕಪ್ಪು ಸಮುದ್ರ ಪ್ರದೇಶದಲ್ಲೂ ಜೋಳ ಉತ್ಪಾದನೆ ಹೆಚ್ಚಳವಾಗುವ ಖಾತರಿಯಲ್ಲಿ, ಪೂರೈಕೆಯ ಬಗ್ಗೆ ಸಂದೇಹಗಳಿವೆ. ಭಾರತದಿಂದ ಅಕ್ಕಿ ರಫ್ತಿನ ನಿರ್ಬಂಧಗಳೂ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜೋಳ, ಗೋಧಿ ಮತ್ತಿತರ ಧಾನ್ಯಗಳ ದರ ಹೆಚ್ಚಳಕ್ಕೆ ಪೂರಕವಾಗಬಹುದೆನ್ನಲಾಗಿದೆ.

## ಅಕ್ಕಿ ಉತ್ಪಾದನೆ 12 ಮಿಲಿಯನ್ ಟನ್ ಇಳಿಕೆ ಸಾಧ್ಯತೆ

ಪ್ರತಿಕೂಲ ಹವಾಮಾನ, ಬಿತ್ತನೆ ಇಳಿಕೆಯಿಂದ ದೇಶೀ ಅಕ್ಕಿ ಉತ್ಪಾದನೆ ಈ ಖಾರೀಫ್ ಬೆಳೆಯಲ್ಲಿ 12 ಮಿಲಿಯನ್ ಟನ್ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಭಾರತದ ಅಕ್ಕಿ ರಫ್ತು 2022 ಎಪ್ರಿಲ್-ಆಗಸ್ಟ್ ಅವಧಿಯಲ್ಲಿ 9.3 ಮಿಲಿಯನ್ ಟನ್‌ಗಳಾಗಿದ್ದು ಹಿಂದಿನ ವರ್ಷ ಇದೇ ಅವಧಿಯಲ್ಲಿ 8.3 ಮಿಲಿಯನ್ ಟನ್ ಅಕ್ಕಿ ರಫ್ತಾಗಿತ್ತೆನ್ನಲಾಗಿದೆ. ಅಕ್ಕಿ, ಗೋಧಿ, ಬೇಳೆಕಾಳು ಪೂರೈಕೆ ಈ ವರ್ಷ ಬಿಗುವಿನಿಂದ ಕೂಡರಲಿದೆಯೆನ್ನಲಾಗಿದ್ದು, ಇವುಗಳ ದರಗಳು ಕನಿಷ್ಠ ಬೆಂಬಲ ಬೆಲೆಯಿಂದ ಹೆಚ್ಚಳವಾಗಿರಲಿದೆಯೆನ್ನಲಾಗಿದ್ದು, ಸರಕಾರ ತನ್ನ ದಾಸ್ತಾನಿಂದ ಹೆಚ್ಚುವರಿ ಆಹಾರ ಧಾನ್ಯಗಳ ಬಿಡುಗಡೆ ಮಾಡಬೇಕಾಗಬಹುದೆನ್ನಲಾಗಿದೆ. ಇದೇ ವೇಳೆ ಸರಕಾರ ಭತ್ತದ ಖರೀದಿ ಹೆಚ್ಚಳ ಮಾಡುವ ಸಾಧ್ಯತೆಯಿದೆ.

## ಇಂಡೋನೇಶಿಯಾದ ಕಚ್ಚಾ ಪಾಮೆಣ್ಣೆ ರೆಫೆರೆನ್ಸ್ ದರ ಇಳಿಕೆ

ಸೆಪ್ಟೆಂಬರ್ ಉತ್ತರಾರ್ಧದಲ್ಲಿ ಇಂಡೋನೇಶಿಯಾ ಕಚ್ಚಾ ಪಾಮೆಣ್ಣೆ ರೆಫೆರೆನ್ಸ್ ದರ ಟನ್‌ಗೆ $ 846.32 ಕ್ಕೆ ಇಳಿಕೆ ಮಾಡಿದೆ. ಪ್ರಥಮಾರ್ದದಲ್ಲಿ ದರ $ 929.66 ಆಗಿತ್ತು. ಇದರಿಂದ ರಫ್ತು ತೆರಿಗೆ ಈಗಿನ $ 74 ರಿಂದ $ 52 (ಟನ್) ಗೆ ಇಳಿಕೆಯಾಗಲಿದೆಯೆನ್ನಲಾಗಿದೆ.

## ಉತ್ತರ ಭಾರತದಲ್ಲಿ ಸಕ್ಕರೆ ದರ ಹೆಚ್ಚಳ

ಉತ್ತರ ಭಾರತದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳದಿಂದ ಸಕ್ಕರೆ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ದಕ್ಷಿಣ ಭಾರತದಲ್ಲಿ ಬೇಡಿಕೆ ಇಳಿಕೆ ಹಾಗೂ ಉತ್ತಮ ಪೂರೈಕೆಯಿಂದ ದರ ಸ್ಥಿರ ಹಾಗೂ ದುರ್ಬಲವಾಗಿದೆ. ಮುಂದೆ ಹಬ್ಬಗಳಿಗಾಗಿ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆ.